# ಕರ್ನಾಟಕ ವಿಧಾನ ಪರಿಷತ್

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : 1112 |
| ಸದಸ್ಯರ ಹೆಸರು | : ಶ್ರೀ ಶರಣಗೌಡ ಬಯ್ಯಾಪುರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ದಿನಾಂಕ | : 22.09.2022 |
| ಉತ್ತರಿಸುವ ಸಚಿವರು | : ಜಲಸಂಪನ್ಮೂಲ ಸಚಿವರು |

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಬಡತನ, ನಿರುದ್ಯೋಗ, ಗುಳೆ ಸಮಸ್ಯೆ, ಕುಡಿಯುವ ನೀರು, ಆರ್ಥಿಕ ಅಸಮಾನತೆ ಹಾಗೂ ಬರಪೀಡಿತ ಪ್ರದೇಶಕ್ಕೆ ಶಾಶ್ವತ ಪರಿಹಾರವಾಗಬಲ್ಲ ನಾರಾಯಣಪುರ ಬಲದಂಡೆ ಕಾಲುವೆಯ 5ಎ ವಿತರಣಾ ಕಾಲುವೆಯ ಕಾರ್ಯ ಸಾಧ್ಯತೆ ಕುರಿತು Nest Consultancy Services ನವರು ತಯಾರಿಸಿದ ವರದಿಯು ಅವೈಜ್ಞಾನಿಕತೆಯಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ನಾರಾಯಣಪೂರ ಬಲದಂಡೆ ಕಾಲುವೆಯ ಕಿ.ಮೀ.17.30 ರ ಬಲಭಾಗದಲ್ಲಿ ಪ್ರಸ್ತಾಪಿತ 5(ಎ) ವಿತರಣಾ ಕಾಲುವೆ ನಿರ್ಮಾಣ ಯೋಜನೆಯಲ್ಲಿ ರಾಯಚೂರು ಜಿಲ್ಲೆಯ ಲಿಂಗಸಗೂರು, ಮಾನವಿ, ರಾಯಚೂರು, ಸಿಂಧನೂರು ತಾಲ್ಲೂಕುಗಳಿಗೆ ಸೇರಿದ ಸುಮಾರು 1,16,660 ಎಕರೆ ಕೃಷಿ ಭೂಮಿಯಾಗಿದ್ದು, ತುಂಗಭಧ್ರಾ ಜಲಾನಯನ ಪ್ರದೇಶ ವ್ಯಾಪ್ತಿಯಲ್ಲಿ ಬರುತ್ತದೆ. ಸದರಿ ಭೂ-ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಬೇಕಾದರೆ, ಕೃಷ್ಣಾ ಮತ್ತು ತುಂಗಭದ್ರಾ ಜಲಾನಯನ ಪ್ರದೇಶವನ್ನು ಪ್ರತ್ಯೇಕಿಸುವ ದಿನ್ನೆ (Ridge) ಪ್ರದೇಶವನ್ನು ದಾಟಲು ಸುಮಾರು 70.00 ಮೀ. ಆಳದಲ್ಲಿ 13.05 ಕಿ.ಮೀ. ಉದ್ದ ಸುರಂಗ ಕಾಲುವೆ ನಿರ್ಮಾಣ ಮಾಡಬೇಕಾಗಿರುತ್ತದೆ. ಸದರಿ ಸುರಂಗ ಕಾಲುವೆ ನಿರ್ಮಾಣವು ಹಟ್ಟಿ ಚಿನ್ನದ ಗಣಿ ಪ್ರದೇಶದ ಸಮೀಪವೇ ಹಾಯ್ದು ಹೋಗಲಿದ್ದು, ಇದರಿಂದ ಉಂಟಾಗಬಹುದಾದ ಸಾಧಕ-ಬಾಧಕಗಳ ಬಗ್ಗೆ ಪರಿಶೀಲಿಸುವುದಾಗಿರುತ್ತದೆ ಮತ್ತು ಉದ್ದೇಶಿತ ಸುರಂಗ ಕಾಲುವೆಯ ಮೇಲ್ಭಾಗದಲ್ಲಿ ಅಂದರೆ ಹಿರೇಹೆಸರೂರು ಗ್ರಾಮದ ವ್ಯಾಪ್ತಿಯಲ್ಲಿ ಪವನ ವಿದ್ಯುತ್ ಉತ್ಪಾದನೆಗಾಗಿ ಪವನ ಯಂತ್ರಗಳನ್ನು ಸ್ಥಾಪಿಸುವ ಕಾರ್ಯ ಪ್ರಾರಂಭವಾಗಿದ್ದು ಇದನ್ನು ಸಹ ಪ್ರಸ್ತಾಪಿತ 5ಎ ವಿತರಣಾ ಕಾಲುವೆಯ ಪಂಕ್ತೀಕರಣ ನಿರ್ಧಾರದಲ್ಲಿ ಪರಿಗಣಿಸುವುದಾಗಿರುತ್ತದೆ. ಮುಂದುವರೆದು, ಯೋಜನೆಯಡಿ ಪ್ರಸ್ತಾಪಿತ 1,16,660 ಎಕರೆ ಪ್ರದೇಶಕ್ಕೆ ನೀರಾವರಿ ಕಲ್ಪಿಸಲು ಸುಮಾರು 12.00 ಟಿ.ಎಂ.ಸಿ ನೀರಿನ ಅವಶ್ಯಕತೆ ಇದ್ದು, ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-1, 2 ಮತ್ತು 3 ಅಡಿ ನೀರಿನ ಅವಕಾಶವಿರುವುದಿಲ್ಲ.<br><br>ನಾರಾಯಣಪೂರ ಬಲದಂಡೆ ಕಾಲುವೆಯಿಂದ ವಿತರಣಾ ಕಾಲುವೆ ಸಂ.5ಎ ಯೋಜನೆಯ ಕುರಿತು ತಾಂತ್ರಿಕ ಸಾಧ್ಯತೆಗಳ ಬಗ್ಗೆ ಕೃಷ್ಣಾ ಭಾಗ್ಯ ಜಲ ನಿಗಮದ ವತಿಯಿಂದ ಸಮಾಲೋಚಕರನ್ನು ನೇಮಿಸಿ ಅಧ್ಯಯನ ಕೈಗೊಂಡು ವರದಿ ಪಡೆಯಲಾಗಿದೆ. ಸದರಿ ವರದಿಯ ಪ್ರಮುಖ ಅಂಶಗಳು ಈ ಕೆಳಗಿನಂತಿವೆ:<br>(1) ನಾರಾಯಣಪೂರ ಬಲದಂಡೆ ಮುಖ್ಯ ಕಾಲುವೆಯ ಕಿಮೀ. 17.30 ರಲ್ಲಿ ಪ್ರಸ್ತಾಪಿತ ವಿತರಣಾ ಕಾಲುವೆ ಸಂ.5(ಎ) ರ ಆಫ್‌ಟೇಕ್‌ನೊಂದಿಗೆ ಒಟ್ಟು ಉದ್ದ ಸುಮಾರು 65.00 ಕಿಮೀ. ಇದ್ದು, ಇದರ ಪೈಕಿ 14.50 ಕಿಮೀ. ಉದ್ದದ ಸುರಂಗ ಮಾರ್ಗ, 50.50 ಕಿಮೀ. ಆಳವಾದ ತೆರೆದ ಕಾಲುವೆ ಒಳಗೊಂಡಿರುತ್ತದೆ.<br>(2) ವಿತರಣಾ ಕಾಲುವೆ 5(ಎ) ರ ಕಿಮೀ. 60.00 ರಲ್ಲಿ ಬರುವ ಕ್ಯಾದಿಗೇರ ಕೆರೆಯನ್ನು ವಿಸ್ತರಿಸಿ ಸಂಗ್ರಹಣಾ ಜಲಾಶಯವನ್ನು ನಿರ್ಮಿಸಿ, ನೀರನ್ನು ಸಂಗ್ರಹಿಸಿ ಭೂ ಇಳಿತ ಮತ್ತು ಏರಿಗೆ ಅನುಗುಣವಾಗಿ ಪೈಪಲೈನ್ ಅಳವಡಿಸಿಕೊಂಡು ಒಟ್ಟಾರೆಯಾಗಿ 31,346 ಹೆ. ಗಳಷ್ಟು ಪ್ರದೇಶವನ್ನು ನೀರಾವರಿಗೆ ಒಳಪಡಿಸಲು ಪ್ರಸ್ತಾಪಿಸಲಾಗಿದೆ. ಸದರಿ ಪ್ರಸ್ತಾವನೆಯು ಕಾರ್ಯ ಸಾಧ್ಯವಾಗುವುದಿಲ್ಲವೆಂದು ಅಭಿಪ್ರಾಯ ಪಡಲಾಗಿದೆ. |
| ಆ) | ಬಂದಿದ್ದಲ್ಲಿ, 5ಎ ಯೋಜನೆಯ ವಿಸ್ತಾರ, ಉದ್ದೇಶ, ಅವಶ್ಯಕತೆ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು? | |

| | | |
|---|---|---|
| | | (3) ಪ್ರಸ್ತಾಪಿತ 5(ಎ) ವಿತರಣಾ ಕಾಲುವೆಯ ಉದ್ದೇಶಿತ 31346 ಹೆ ಅಚ್ಚುಕಟ್ಟು ಪ್ರದೇಶದ ಪೈಕಿ ಈಗಾಗಲೇ ನಂದವಾಡಗಿ ಏತ ನೀರಾವರಿ ಹಂತ-2 ಮತ್ತು ನಾಬದಂಕಾ ವಿತರಣಾ ಕಾಲುವೆ 9(ಎ) ಅಡಿಯಲ್ಲಿ ಒಟ್ಟು 26,146 ಹೆ. ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. ಇದರನ್ವಯ ಸದರಿ ವಿತರಣಾ ಕಾಲುವೆಯಡಿ ಬಾಕಿ ಉಳಿದಿರುವ ಅಚ್ಚುಕಟ್ಟು ಪ್ರದೇಶವು ಸುಮಾರು 5200 ಹೆ.ಗಳಷ್ಟು ಮಾತ್ರವಾಗಿರುತ್ತದೆ.<br><br>(4) ಸದರಿ 5(ಎ) ವಿತರಣಾ ಕಾಲುವೆಯು ಈಗಾಗಲೇ ಇರುವ ನೀರಾವರಿ ಅಚ್ಚುಕಟ್ಟು ಪ್ರದೇಶ (ರಾಂಪೂರ ಏತ ನೀರಾವರಿ ಮತ್ತು ವಿತರಣಾ ಕಾಲುವೆ 9(ಎ) ಅಚ್ಚುಕಟ್ಟು ಪ್ರದೇಶ) ಮತ್ತು ಹಟ್ಟಿ ಚಿನ್ನದ ಗಣಿಯ ಪ್ರದೇಶಗಳ ಮೂಲಕ ಹಾದು ಹೋಗುತ್ತಿರುವುದರಿಂದ ಸುಮಾರು 400 ಎಕರೆಯಷ್ಟು ಫಲವತ್ತಾದ ಭೂ ಪ್ರದೇಶವನ್ನು ಸ್ವಾಧೀನಕ್ಕೆ ಪಡೆಯಬೇಕಾಗಿದ್ದು, ಭೂಸ್ವಾಧೀನ ಪ್ರಕ್ರಿಯೆಯಲ್ಲಿ ರೈತರು ಮತ್ತು ಸಂಬಂಧಪಟ್ಟ ಇಲಾಖೆಯ ಅನುಮತಿಯನ್ನು ಪಡೆಯುವುದು ಕಷ್ಟ ಸಾಧ್ಯವಾಗಿರುತ್ತದೆ.<br><br>(5) ಸದರಿ ಯೋಜನೆಗೆ ಹೆಚ್ಚುವರಿ ನೀರಿನ ಹಂಚಿಕೆ ಅವಶ್ಯಕತೆ ಇದ್ದು, ಯೋಜನೆಯ ನಿರ್ಮಾಣ ವೆಚ್ಚ ಮತ್ತು ಯೋಜನೆಯಿಂದ ದೊರಕುವ ಲಾಭಗಳನ್ನು ಪರಿಗಣಿಸಿ ಲೆಕ್ಕ ಹಾಕಲಾದ ಅನುಪಾತವು 0.04 (BC Ratio) ಗಳಷ್ಟಿದ್ದು ಆರ್ಥಿಕವಾಗಿ ಕಾರ್ಯಸಾಧುವಾಗಿರುವುದಿಲ್ಲ.<br><br>ಮುಂದುವರೆದು, ರಾಯಚೂರು ಜಿಲ್ಲೆಯ ಲಿಂಗಸಗೂರ ಹಾಗೂ ಮಸ್ಕಿ ತಾಲ್ಲೂಕಿನ ನೀರಾವರಿ ವಂಚಿತ ಪ್ರದೇಶವಾದ ಸುಮಾರು 23,000 ಹೆ. ಪ್ರದೇಶಕ್ಕೆ (18,000 ಪ್ರದೇಶ ನಂದವಾಡಗಿ ಏತ ನೀರಾವರಿ ಹಂತ-2 + 5,000 ಹೆ. ಪ್ರದೇಶ ನಂದವಾಡಗಿ ಏತ ನೀರಾವರಿ ಹಂತ-2ರ ಅಚ್ಚುಕಟ್ಟು ಪ್ರದೇಶದ ಮಧ್ಯದಲ್ಲಿ ನೀರಾವರಿ ವಂಚಿತ ಪ್ರದೇಶ) ನೀರಾವರಿ ಸೌಲಭ್ಯ ಕಲ್ಪಿಸುವ ಕುರಿತಂತೆ ವಟಗಲ್ ಬಸವೇಶ್ವರ ಏತ ನೀರಾವರಿ ಯೋಜನೆಯ ಸರ್ವೆ ತನಿಖಾ ಕಾರ್ಯ ಪ್ರಗತಿಯಲ್ಲಿದ್ದು, ಕೃಷ್ಣಾ ಭಾಗ್ಯ ಜಲ ನಿಗಮದ ಪರಿಶೀಲನೆಯಲ್ಲಿರುತ್ತದೆ. |

ಜಸಂಇ 115 ಡಬ್ಲ್ಯೂಬಿಎಂ 2022

(ಗೋವಿಂದ ಎಂ.ಕಾರಜೋಳ)
ಜಲಸಂಪನ್ಮೂಲ ಸಚಿವರು